# ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ

4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು– 560 041


---

**ಸಂಖ್ಯೆ. ಆರ್‌ಜಿಯು/ಇಎಸ್‌ಟಿ/56/2023–24** **ದಿನಾಂಕ: 01/12/2023**

## ಸುತ್ತೋಲೆ

**ವಿಷಯ:** 2024ನೇ ಸಾಲಿನ ಸಾರ್ವತ್ರಿಕ ಮತ್ತು ಪರಿಮಿತ ರಜೆ ವಿವರಗಳ ಪಟ್ಟಿ.

**ಉಲ್ಲೇಖ:** ಸರ್ಕಾರದ ಅಧಿಸೂಚನೆ–1 &2 ಸಂಖ್ಯೆ: ಸಿಆಸುಇ 16 ಹೆಚ್‌ಹೆಚ್‌ಎಲ್ 2023, ದಿನಾಂಕ: 28.11.2023.

* * *

ಸರ್ಕಾರದ ಉಲ್ಲೇಖಿತ ಅಧಿಸೂಚನೆಯನ್ವಯ, 2024ನೇ ಸಾಲಿಗೆ ಸಾರ್ವತ್ರಿಕ ಮತ್ತು ಪರಿಮಿತ ರಜಾ ದಿನಗಳ ಪಟ್ಟಿಯನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಸಂಯೋಜಿತ ಕಾಲೇಜುಗಳ ಮಾಹಿತಿಗಾಗಿ ಕೆಳಕಂಡಂತೆ ಪ್ರಕಟಿಸಿದೆ : –

ಎಲ್ಲಾ ಎರಡನೇ ಶನಿವಾರ, ನಾಲ್ಕನೇ ಶನಿವಾರ ಮತ್ತು ಭಾನುವಾರಗಳು ಹಾಗೂ ಈ ಕೆಳಕಂಡ ದಿನಗಳು.

### ಅ) ಸಾರ್ವತ್ರಿಕ ರಜೆಗಳು :

| ಕ್ರಮ. ಸಂಖ್ಯೆ. | ದಿನಾಂಕ | ವಾರಗಳು | ಸಾರ್ವತ್ರಿಕ ರಜಾ ದಿನಗಳು |
|---|---|---|---|
| 1. | 15.01.2024 | ಸೋಮವಾರ | ಉತ್ತರಾಯಣ ಪುಣ್ಯಕಾಲ, ಮಕರ ಸಂಕ್ರಾಂತಿ |
| 2. | 26.01.2024 | ಶುಕ್ರವಾರ | ಗಣರಾಜ್ಯೋತ್ಸವ |
| 3. | 08.03.2024 | ಶುಕ್ರವಾರ | ಮಹಾ ಶಿವರಾತ್ರಿ |
| 4. | 29.03.2024 | ಶುಕ್ರವಾರ | ಗುಡ್ ಫ್ರೈಡೆ |
| 5. | 09.04.2024 | ಮಂಗಳವಾರ | ಯುಗಾದಿ ಹಬ್ಬ |
| 6. | 11.04.2024 | ಗುರುವಾರ | ಖುತುಬ್–ಎ–ರಂಜಾನ್ |
| 7. | 01.05.2024 | ಬುಧವಾರ | ಕಾರ್ಮಿಕ ದಿನಾಚರಣೆ |
| 8. | 10.05.2024 | ಶುಕ್ರವಾರ | ಬಸವ ಜಯಂತಿ /ಅಕ್ಷಯ ತೃತೀಯ |
| 9. | 17.06.2024 | ಸೋಮವಾರ | ಬಕ್ರೀದ್ |
| 10. | 17.07.2024 | ಬುಧವಾರ | ಮೊಹರಂ ಕಡೇ ದಿನ |
| 11. | 15.08.2024 | ಗುರುವಾರ | ಸ್ವಾತಂತ್ರ್ಯ ದಿನಾಚರಣೆ |
| 12. | 07.09.2024 | ಶನಿವಾರ | ವರಸಿದ್ಧಿ ವಿನಾಯಕ ವ್ರತ |

| | | | |
|---|---|---|---|
| 13. | 16.09.2024 | ಸೋಮವಾರ | ಈದ್–ಮಿಲಾದ್ |
| 14. | 02.10.2024 | ಬುಧವಾರ | ಗಾಂಧಿ ಜಯಂತಿ /ಮಹಾಲಯ ಅಮವಾಸ್ಯೆ |
| 15. | 11.10.2024 | ಶುಕ್ರವಾರ | ಮಹಾನವಮಿ, ಆಯುಧಪೂಜೆ |
| 16. | 17.10.2024 | ಗುರುವಾರ | ಮಹರ್ಷಿ ವಾಲ್ಮೀಕಿ ಜಯಂತಿ |
| 17. | 31.10.2024 | ಗುರುವಾರ | ನರಕ ಚತುರ್ದಶಿ |
| 18. | 01.11.2024 | ಶುಕ್ರವಾರ | ಕನ್ನಡ ರಾಜ್ಯೋತ್ಸವ |
| 19. | 02.11.2024 | ಶನಿವಾರ | ಬಲಿಪಾಡ್ಯಮಿ, ದೀಪಾವಳಿ |
| 20. | 18.11.2024 | ಸೋಮವಾರ | ಕನಕದಾಸ ಜಯಂತಿ |
| 21. | 25.12.2024 | ಬುಧವಾರ | ಕ್ರಿಸ್‌ಮಸ್ |

**ಸೂಚನೆ:–**

1) ಈ ರಜಾ ಪಟ್ಟಿಯಲ್ಲಿ ಭಾನುವಾರಗಳಂದು ಬರುವ ಡಾ॥ ಬಿ.ಆರ್ ಅಂಬೇಡ್ಕರ್ ಜಯಂತಿ (14.04.2024) ಮತ್ತು ಮಹಾವೀರ ಜಯಂತಿ (21.04.2024) ಹಾಗೂ ಎರಡನೇ ಶನಿವಾರದಂದು ಬರುವ ವಿಜಯದಶಮಿ (12.10.2024) ಈ ರಜೆ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ.

2) ಸಾರ್ವತ್ರಿಕ ರಜಾ ದಿನಗಳಲ್ಲಿ ರಾಜ್ಯಾದ್ಯಂತ ಸರ್ಕಾರಿ ಕಛೇರಿಗಳು ಮುಚ್ಚಲ್ಪಡುತ್ತವೆ. ಕಛೇರಿಯ ಜರೂರು ಕೆಲಸವನ್ನು ವಿಲೇವಾರಿ ಮಾಡುವ ಬಗ್ಗೆ ಇಲಾಖಾ ಮುಖ್ಯಸ್ಥರುಗಳು ಸೂಕ್ತ ವ್ಯವಸ್ಥೆ ಮಾಡತಕ್ಕದ್ದು.

3) ಈ ಪಟ್ಟಿಯಲ್ಲಿ ಸೇರಿಸಲಾಗಿರುವ ಮುಸಲ್ಮಾನ ಬಾಂಧವರ ಹಬ್ಬಗಳು ನಿಗಧಿತ ದಿನಾಂಕದಂದು ಬೀಳದಿದ್ದರೆ ಸರ್ಕಾರಿ ಸೇವೆಯಲ್ಲಿರುವ ಮುಸಲ್ಮಾನ ಬಾಂಧವರಿಗೆ ನಿಗಧಿತ ರಜೆಗೆ ಬದಲಾಗಿ ಹಬ್ಬದ ದಿವಸ ರಜಾ ಮಂಜೂರು ಮಾಡಬಹುದು.

4) ದಿನಾಂಕ: 03.09.2024 (ಮಂಗಳವಾರ) ಕೈಲ್ ಮೂಹೂರ್ತ, ದಿನಾಂಕ: 17.10.2024 (ಗುರುವಾರ) ತುಲಾ ಸಂಕ್ರಮಣ ಹಾಗೂ ದಿನಾಂಕ: 14.12.2024 (ಶನಿವಾರ) ಹುತ್ತರಿ ಹಬ್ಬವನ್ನು ಆಚರಿಸಲು ಕೊಡಗು ಜಿಲ್ಲೆಗೆ ಮಾತ್ರ ಅನ್ವಯವಾಗುವಂತೆ ಸ್ಥಳೀಯ ಸಾರ್ವತ್ರಿಕ ರಜೆಯನ್ನು ಘೋಷಿಸಿದೆ.

5) ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಪ್ರತ್ಯೇಕ ರಜಾ ದಿನಗಳ ಪಟ್ಟಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಪ್ರಕಟಿಸುವರು.

6) ಸಾರ್ವತ್ರಿಕ ರಜಾ ದಿನಗಳ ಜೊತೆಗೆ ರಾಜ್ಯ ಸರ್ಕಾರಿ ನೌಕರರು ಎರಡು ದಿವಸಗಳಿಗೆ ಮೀರದಂತೆ 2024ನೇ ವರ್ಷದಲ್ಲಿ ಅಧಿಸೂಚನೆ–1ರ ಅನುಬಂಧದಲ್ಲಿ ತಿಳಿಸಿರುವ ಪರಿಮಿತ ರಜೆಯನ್ನು ಪೂರ್ವಾನುಮತಿ ಪಡೆದು ಉಪಯೋಗಿಸಿಕೊಳ್ಳಬಹುದು. ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲು ಅಧಿಕಾರವುಳ್ಳ ಅಧಿಕಾರಿಗಳು ಪ್ರಸ್ತುತ ಅನುಮತಿಗೆ ಮಂಜೂರಾತಿ ನೀಡತಕ್ಕದ್ದು.

| ಆ) ಪರಿಮಿತ ರಜೆಗಳು : | | | |
|---|---|---|---|
| ಕ್ರಮ. ಸಂಖ್ಯೆ. | ದಿನಾಂಕ | ವಾರಗಳು | ಪರಿಮಿತ ರಜಾ ದಿನಗಳು |
| 1. | 01.01.2024 | ಸೋಮವಾರ | ನೂತನ ವರ್ಷಾರಂಭ |
| 2. | 25.03.2024 | ಸೋಮವಾರ | ಹೋಳಿ ಹಬ್ಬ |
| 3. | 30.03.2024 | ಶನಿವಾರ | ಹೋಲಿ ಸ್ಯಾಟರ್ ಡೇ |
| 4. | 05.04.2024 | ಶುಕ್ರವಾರ | ಜುಮತ್–ಉಲ್–ವಿದಾ |
| 5. | 06.04.2024 | ಶನಿವಾರ | ಷಬ್–ಎ–ಖಾದರ್ |
| 6. | 17.04.2024 | ಬುಧವಾರ | ಶ್ರೀ ರಾಮನವಮಿ |
| 7. | 23.05.2024 | ಗುರುವಾರ | ಬುದ್ಧ ಪೂರ್ಣಿಮ |
| 8. | 16.08.2024 | ಶುಕ್ರವಾರ | ಶ್ರೀ ವರಮಹಾಲಕ್ಷ್ಮಿ ವ್ರತ |
| 9. | 19.08.2024 | ಸೋಮವಾರ | ಋಗ್ ಉಪಕರ್ಮ, ಯಜುರ್ ಉಪಕರ್ಮ |
| 10. | 20.08.2024 | ಮಂಗಳವಾರ | ಬ್ರಹ್ಮಶ್ರೀ ನಾರಾಯಣಗುರು ಜಯಂತಿ |
| 11. | 26.08.2024 | ಸೋಮವಾರ | ಶ್ರೀ ಕೃಷ್ಣ ಜನ್ಮಾಷ್ಟಮಿ |
| 12. | 06.09.2024 | ಶುಕ್ರವಾರ | ಸ್ವರ್ಣ ಗೌರಿ ವ್ರತ |
| 13. | 17.09.2024 | ಮಂಗಳವಾರ | ವಿಶ್ವಕರ್ಮ ಜಯಂತಿ |
| 14. | 15.11.2024 | ಶುಕ್ರವಾರ | ಗುರು ನಾನಕ್ ಜಯಂತಿ |
| 15. | 24.12.2024 | ಮಂಗಳವಾರ | ಕ್ರಿಸ್‌ಮಸ್ ಈವ್ |

**ಸೂಚನೆ:–**

1) ಮಧ್ವ ನವಮಿ (18.02.2024), ಷಬ್–ಎ–ಬರಾತ್ (25.02.2024), ಶ್ರೀ ಶಂಕರಚಾರ್ಯ ಜಯಂತಿ, ಶ್ರೀ ರಾಮಾನುಜಾಚಾರ್ಯ ಜಯಂತಿ (12.05.2024) ಕನ್ಯಾ ಮರಿಯಮ್ಮ ಜಯಂತಿ (08.09.2024) ಮತ್ತು ತಿರು ಓಣಂ (15.09.2024) ಭಾನುವಾರದಂದು ಸೌರಮಾನ ಯುಗಾದಿ /ದೇವರ ದಾಸೀಮಯ್ಯ ಜಯಂತಿ (13.04.2024) ಹಾಗೂ ಹುತ್ತರಿ ಹಬ್ಬ (14.12.2024) ಎರಡನೇ ಶನಿವಾರದಂದು ಬರುವುದರಿಂದ ಈ ರಜೆ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ.

2) ಅನಂತ ಪದ್ಮನಾಭ ವ್ರತ (16.09.2024) ಸೋಮವಾರ ಈದ್–ಮಿಲಾದ್ ಹಾಗೂ ತುಲಾ ಸಂಕ್ರಮಣ (17.10.2024) ಗುರುವಾರ ಮಹರ್ಷಿ ವಾಲ್ಮೀಕಿ ಜಯಂತಿ ನಿಮಿತ್ತ ಘೋಷಿಸಿರುವ ಸಾರ್ವತ್ರಿಕ ರಜಾ ದಿನಗಳಂದು ಬರುವುದರಿಂದ ಈ ರಜೆ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ.

ವಿಶ್ವವಿದ್ಯಾಲಯವು ಪ್ರತಿ ತಿಂಗಳಲ್ಲಿ ಎರಡನೇ ಶನಿವಾರ ಮತ್ತು ನಾಲ್ಕನೇ ಶನಿವಾರವನ್ನು ಹೊರತುಪಡಿಸಿ, ಉಳಿದ ಎಲ್ಲಾ ಶನಿವಾರಗಳಂದು ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ ಕಾರ್ಯವನ್ನು ನಿರ್ವಹಿಸುತ್ತದೆ.

*[**ಸೂಚನೆ:** ಸರ್ಕಾರವು ಮೇಲೆ ಸೂಚಿಸಿರುವ ಸಾರ್ವತ್ರಿಕ ರಜಾ ದಿನ ಅಥವಾ ಪರಿಮಿತ ರಜಾ ದಿನಗಳನ್ನು ಬದಲಾಯಿಸಿ ಆದೇಶ ಹೊರಡಿಸಿದಲ್ಲಿ ಅದರಂತೆ ಸೂಕ್ತ ಬದಲಾವಣೆ ಮಾಡಿಕೊಳ್ಳತಕ್ಕದ್ದು]*

**ಕುಲಸಚಿವರು**

**ಇವರಿಗೆ,**

ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿಗಾಗಿ

**ಪ್ರತಿಗಳು : –**

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು–560 001.
3. ಮಾನ್ಯ ಕುಲಪತಿಗಳು / ಕುಲಸಚಿವರು / ಕುಲಸಚಿವರು (ಮೌಲ್ಯಮಾಪನ) / ಹಣಕಾಸು ಅಧಿಕಾರಿಗಳ ಆಪ್ತಸಹಾಯಕರಿಗೆ, ರಾ.ಗಾ.ಆ.ವಿ.ವಿ, ಬೆಂಗಳೂರು.
4. ಸಿಸ್ಟಮ್ ಅನಾಲಿಸ್ಟ್, ರಾ.ಗಾ.ಆ.ವಿ.ವಿ, ಬೆಂಗಳೂರು– ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
5. ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ.
6. ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು / ನೌಕರರುಗಳ ವರ್ಗದವರಿಗೆ.
7. ಸೂಚನಾ ಫಲಕ.
8. ಕಛೇರಿ ಪ್ರತಿ.